



ಗಾಂಧಿಸ್ಮೃತಿಯನ್ನು ಪಿಸುಗುಡುವಂತೆ ಕಾಣಿಸುವ ಪೋರಬಂದರಿನ ಒಂದು ಬೀದಿ

ಹತ್ತಿರದಲ್ಲಿರಬೇಕು. ಅಲ್ಲಿಗೆ ಹೋದಮೇಲೆ ಯಾರನ್ನಾದರೂ ಕೇಳಿ ನೋಡಿ' ಎಂದರು. ಆಗ ಸಹಾಯಕ್ಕೆ ಬಂದದ್ದು ವಿದೇಶೀ ಗೂಗಲ್! ಅದು ತೋರಿಸಿದಂತೆ ನಡೆದು ಗಲ್ಲಿ ಗಲ್ಲಿ ಸುತ್ತಿ ಅವರ ಮನೆ ತಲುಪಿದಾಗ ಬಾಗಿಲು ಹಾಕಿತ್ತು! ಅಂದು ಸರ್ಕಾರಿ ರಜೆ!

ಗಾಂಧಿ ಜೀವಿಸಿದ್ದ ಆ ಮನೆಯ ಹೆಸರು 'ಕಬಾ ಗಾಂಧಿ ನೆ ಡೇಲಾ'. ಅದರ ಮುಂದೆ ನಿಂತಾಗ ನಮಗೆ ರೋಮಾಂಚನವಾಗಿದ್ದಂತೂ ನಿಜ. ಆ ಮನೆ ಇರುವ ರಸ್ತೆ ಅತಿ ಕಿರಿದಾಗಿದ್ದು ಉದ್ದಕ್ಕೂ ಮಾರಾಟ ಮಳಿಗೆಗಳ ತಾಣವಾಗಿದೆ. ನಮ್ಮ ಚಿಕ್ಕಪೇಟೆಯ ಗಲ್ಲಿಯನ್ನು ನೆನಪಿಸಿಕೊಳ್ಳಿ, ಹಾಗಿದೆ ಅದು. ಅಕ್ಕಪಕ್ಕದವರನ್ನು ವಿಚಾರಿಸಿದಾಗ 'ನಾಳೆ ಬೆಳಗ್ಗೆ ಬನ್ನಿ' ಎಂದರು. ಅದೊಂದು ಟ್ರಸ್ಟ್‌ನ ಒಡೆತನದಲ್ಲಿರುವ ಮನೆ. ಬೆಳಗ್ಗೆ ಎಂಟರಿಂದ ಸಂಜೆ ಐದು ಗಂಟೆಯವರೆಗೆ ಸಾರ್ವಜನಿಕರಿಗೆ ತೆರೆದಿರುತ್ತದೆ. 'ಒಳಗೆ ಒಂದಿಷ್ಟು ಫೋಟೋಗಳಿವೆ ಅಷ್ಟೇ' ಎಂದರು. ಗಾಂಧಿಯ ಬಗ್ಗೆ ಅಲ್ಲಿಯ ಜನರಿಗೆ ಅಂಥಾ ವಿಶ್ವಾಸವಿದ್ದಂತೆ ಕಾಣಲಿಲ್ಲ.

ಅಲ್ಲಿಂದ ಅಹಮದಾಬಾದಿಗೆ ಬಂದು ಸಬರಮತಿ ಆಶ್ರಮಕ್ಕೆ ಬಂದಾಗ ಗಾಂಧಿಯ ವಿವಿಧ ಮುಖಗಳ ದರ್ಶನವಾಯಿತು. ಅವರ ಬಾಲ್ಯದ ಬಗ್ಗೆ ಇನ್ನಷ್ಟು ಮಾಹಿತಿ ಅಲ್ಲಿದ್ದ ಗ್ರಂಥಾಲಯದಿಂದ ದೊರಕಿತು. ಮುಂದಿನ ಚಿತ್ರಕಥೆಗೆ ಇದು ಬಹಳ ನೆರವಾಯಿತು.

## ಪೋರಬಂದರಿನ ದಾರಿಯಲ್ಲಿ

ನಮ್ಮ ಮುಂದಿನ ಹಾದಿ ಗಾಂಧಿ ಹುಟ್ಟಿದ ಪೋರಬಂದರಿನತ್ತ ಸಾಗಿತು. ರಾಜಕೋಟೆಗೆ ಹೋಲಿಸಿದರೆ ಪೋರಬಂದರ್ ಒಂದು ಸುಂದರ ನಗರ. ನಮ್ಮ ಮೈಸೂರಿನ ಹಾಗೆ ಅನ್ನಬಹುದು. ಅರಬ್ಬಿ ಸಮುದ್ರದ ದಡದಲ್ಲಿರುವ ಈ ಊರು ಬಹಳ ಹಿಂದಿನಿಂದಲೂ ವ್ಯಾಪಾರ ವಹಿವಾಟಿಗೆ ಪ್ರಸಿದ್ಧಿ. ಹಾಗಾಗಿಯೇ 'ಬಂದರು' ಎನ್ನುವ ಹೆಸರು ತಳಕುಹಾಕಿಕೊಂಡಿದೆ. ಆದರೂ ತನ್ನ ಸಾಂಸ್ಕೃತಿಕ ಗುಣವನ್ನು ಇದು ಕಳೆದುಕೊಂಡಿಲ್ಲ ಎನ್ನುವುದು ಸಮಾಧಾನ.

ಇಲ್ಲಿ ಗಾಂಧಿ ಹುಟ್ಟಿದ ಸುಮಾರು ನೂರ ಎಪ್ಪತ್ತು ವರ್ಷಗಳಷ್ಟು ಹಳೆಯದಾದ ಮನೆ ಇದೆ. ಅದನ್ನು ಪ್ರಾಚ್ಯವಸ್ತು ಸಂಗ್ರಹಾಲಯ ಕಾಪಿಟ್ಟುಕೊಂಡಿದೆ. ಆದರೂ ನಾವು ಭಾರತೀಯರು ಪಳೆಯುಳಿಕೆಯನ್ನು ಕಾಪಾಡುವಲ್ಲಿ ನಿರ್ಲಕ್ಷ್ಯ ಹೊಂದಿದ್ದೇವೆ ಎನ್ನುವುದು ಅದನ್ನು ನೋಡಿದಾಗ ಮತ್ತೊಮ್ಮೆ ಸಾಬೀತಾಯಿತು. ಆ ಮನೆಯನ್ನು ನೋಡುವುದು, ಮೂಲೆ ಮೂಲೆ ತಡಕುತ್ತಾ ಸಾಗುವುದು, ಗಾಂಧಿಯ ಹೆಜ್ಜೆಗುರುತುಗಳನ್ನು ಅರಸುವುದು ಒಂದು ವಿಶಿಷ್ಟ ಅನುಭವವೇ ಸರಿ. ಇದೆಲ್ಲ ನೆನೆದಾಗ ಐನ್‌ಸ್ಟೈನ್ ಹೇಳಿದ ಮಾತು ನೆನಪಿಗೆ ಬರುತ್ತದೆ. 'ಮುಂದೊಂದು ದಿನ ಗಾಂಧಿ ಎಂಬ ವ್ಯಕ್ತಿ ಈ ನೆಲದ ಮೇಲೆ ನಡೆದಾಡಿದ್ದ ಎನ್ನುವುದನ್ನು ಜಗತ್ತು ಅಚ್ಚರಿಯಿಂದ ಕಾಣುತ್ತದೆ...'

ಗಾಂಧಿ ಕುಟುಂಬದವರು ಯಾರಾದರೂ ಪೋರಬಂದರಿನಲ್ಲಿ ಇದ್ದಾರೇನೋ ಎಂದು ವಿಚಾರಿಸಲಾಗಿ 'ಯಾರೂ ಇಲ್ಲ' ಎಂದು ತಿಳಿಯಿತು. ಗಾಂಧಿಯೊಂದಿಗೆ ಒಡನಾಡಿದ ವ್ಯಕ್ತಿಗಳಿಗೆ ಶೋಧಿಸಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಸಿಕ್ಕವರು ಗಾಂಧೀವಾದಿ ನರೋತ್ತಮ ಪಲಾಣ್. ಗಾಂಧಿಯ ಹೆಸರು ಕೇಳಿದಾಕ್ಷಣ ಅವರ ಕಣ್ಣುಗಳು ಹೊಳೆದವು. 'ಮೈಯಲ್ಲಿ ಆರಾಮಿಲ್ಲ' ಎಂದು ಕುಳಿತಿದ್ದವರು ಚೈತನ್ಯದಿಂದ ಎದ್ದು ಕುಳಿತರು. 'ಓ, ಬಾಪೂ ಬಾಲ್ಯದ ಬಗ್ಗೆ ಸಿನಿಮಾ ಮಾಡುತ್ತಿದ್ದೀರಾ? ಬಹುತ್ ಅಚ್ಛಾ ಕಾಮ್ ಹೈ' ಎಂದು ಎದ್ದು ಮನೆಯೆಲ್ಲಾ ಹುಡುಕಾಡಿ ಗಾಂಧಿ ಕುರಿತ ಅಪರೂಪದ ಪುಸ್ತಕಗಳನ್ನು ತೋರಿಸಿದರು. ನೂರು ವರ್ಷದ ಹಿಂದೆ ಕಾಥಿಯಾವಾರಾದಲ್ಲಿ ಬಳಸುತ್ತಿದ್ದ ವಸ್ತುಗಳ ಮಾದರಿಯನ್ನು ಪ್ರದರ್ಶಿಸಿದರು. ಗುಜರಾತಿಗಳು ಉಡುವ ವಸ್ತ್ರವಿನ್ಯಾಸವನ್ನು ಪರಿಚಯಿಸಿಕೊಟ್ಟರು. ಅವರೊಂದಿಗೆ ಮಾತನಾಡುತ್ತಿದ್ದರೆ ಸಮಯ ಹೋಗುವುದೇ ತಿಳಿಯುವುದಿಲ್ಲ.

ಅವರೊಂದಿಗೆ ಹಲವು ಗಂಟೆ ಕಳೆದು ಹೊರಡುವಾಗ ಕೈ ಹಿಡಿದು ಹೇಳಿದರು. 'ನಮ್ಮವರಿಗೆ ಗಾಂಧಿಯವರ ಬಗ್ಗೆ ಇರುವ ಅಭಿಪ್ರಾಯ ಅಷ್ಟಕ್ಕಷ್ಟೇ. ಯಾಕೆಂದು ಕೇಳಿದರೆ ಸ್ವಾತಂತ್ರ್ಯಪೂರ್ವಕ್ಕೆ ಹೋಗುತ್ತಾರೆ. ಆದರೆ ಗಾಂಧಿ ತಪ್ಪು ಮಾಡಿರಬಹುದು ಎಂಬುದನ್ನು ನಾನು ಒಪ್ಪುವುದಿಲ್ಲ.

ಅಂದಿನ ಸಂದರ್ಭದ ಒತ್ತಡಗಳು, ಅನಿವಾರ್ಯತೆಗಳು ಹೇಗಿದ್ದವೋ ಯಾರಿಗೆ ಗೊತ್ತು? ನೀವೇನೂ ಅನ್ಯಥಾ ಭಾವಿಸಬೇಡಿ. ಅದೆಲ್ಲಾ ಬಿಟ್ಟುಬಿಡಿ. ಕಾಲವೇ ಎಲ್ಲದಕ್ಕೂ ಉತ್ತರಕೊಡುತ್ತದೆ. ಆದರೆ ನನ್ನದು ಎಂಥಾ ಭಾಗ್ಯ ನೋಡಿ! ಗಾಂಧಿ ಹುಟ್ಟಿದ ಊರಿನಲ್ಲಿ ನಾನೂ ಹುಟ್ಟಿದ್ದೇನೆ. ಅವರಂತಾಗದಿದ್ದರೂ ಅವರಂತಾಗಲು ಪ್ರಯತ್ನಪಟ್ಟಿದ್ದೇನೆ. ಮುಂದಿನ ಜನ್ಮವಿದ್ದರೆ ಇಲ್ಲೇ ಹುಟ್ಟುಬೇಕು ಎಂಬ ಬಯಕೆ ನನ್ನದು...' ಎಂದು ನಲ್ಮೆಯ ಮಾತುಗಳನ್ನಾಡಿದರು ಎಂಬತ್ತಾರರ ಪಲಾಣ್.

ಕೊನೆಯಲ್ಲಿ ಅಬ್ದುಲ್ ಕಲಾಂ ಅವರಿಗೆ ಸಂಬಂಧಿಸಿದ ಸನ್ನಿವೇಶವೊಂದನ್ನು ಉದಾಹರಿಸಿದರು. ಕಲಾಂ ಅವರನ್ನು ಒಮ್ಮೆ ಒಬ್ಬರು, 'ನಮ್ಮ ಜೀವನದ ಅತ್ಯಂತ ಸುಲಭವಾದ ಮತ್ತು ಅತ್ಯಂತ ಕ್ಲಿಷ್ಟವಾದ ಕೆಲಸ ಯಾವುದು ಎಂದು ಕೇಳಿದರಂತೆ' ಅದಕ್ಕೆ ಕಲಾಂ ಉತ್ತರ – 'ತಪ್ಪುಗಳು'. 'ಇನ್ನೊಬ್ಬರ ತಪ್ಪುಗಳತ್ತ ಬೆರಳು ತೋರಿಸುವುದು ತೀರಾ ಸುಲಭದ ಕೆಲಸ, ನಮ್ಮ ತಪ್ಪುಗಳನ್ನೇ ನಾವು ಅರಿಯುವುದು ತುಂಬ ಕ್ಲಿಷ್ಟವಾದ ಕೆಲಸ.'